ಒಂಟೆಗಳುಃ ಮರುಭೂಮಿಯ ಹಡಗುಗಳು



ಜಾನ್ ಎಫ್ ವಾಟರ್ಸ

ಚಿತ್ರಗಳುಃ ರೆನಾಲ್ಡ ರಫಿನ್ಸ


ಒಂಟೆ ಒಂದು ಮನುಷ್ಯನ ಕೆಲಸಕ್ಕಾಗಿರುವ ಪ್ರಾಣಿ. ಅದರ ಕಣ್ಣು ರೆಪ್ಪೆಗಳು ಕೂಡ ಕಾರ್ಯ ಮಾಡುತ್ತಿರುತ್ತವೆ.ಒಂಟೆ ಮರುಭೂಮಿಯಲ್ಲಿ ವಾರಗಟ್ಟಲೆ ಪ್ರವಾಸ ಮಾಡಿದರೂ ಒಂದು ಹನಿ ನೀರಿಲ್ಲದೆ ಇರಬಹುದು. ಆ ಮೇಲೆ ನೀರು ಸಿಕ್ಕಾಗ ನೂರಾರು ಲಿಟರ ನೀರನ್ನು ಒಂದೇ ಸಲ ಕುಡಿಯಬಹುದು. ಬಿಸಿಲಿನ ಝಳವಿದ್ದ ಭೂಮಿಯಲ್ಲಿರುವ ಈ ಪ್ರಾಣಿ ತಿನ್ನಲು ಏನೂ ದೊರೆಯದಿದ್ದಾಗ ತನ್ನ ಬೆನ್ನಿನ ಮೇಲಿನ ಊನುಗಳಲ್ಲಿಯ ಕೊಬ್ಬನ್ನು ತಿಂದು ಇರಬಹುದು. ಹೀಗಾಗಿ ಒಂಟೆ ಇಂತಹ ಭೂಮಿಯಲ್ಲಿ ಇರುವ ಸಮುದಾಯಗಳಿಗೆ ಬೆಲೆಯುಳ್ಳ ಸಂಪತ್ತು ಎಂದೆನ್ನಿಸುತ್ತದೆ.

ಜಾನ್ ವಾಟರ್ಸ ಇವರು ಒಂಟೆಗಳು ಇಕ್ಕಟ್ಟಿನ ಪರಿಸ್ಥಿತಿಗಳಲ್ಲಿ ಕೂಡ ಹೇಗೆ ಜೀವಿಸುತ್ತವೆ ಎಂಬುದನ್ನು ಬಣ್ಣಿಸಿದ್ದಾರೆ. ಒಂಟೆಗಳನ್ನಾಗಲಿ, ಮರುಭೂಮಿಯಾಗಲಿ ನೋಡದೆ ಇದ್ದ ಮಕ್ಕಳಿಗೆ ಈ ಪ್ರಾಣಿಯ ಪರಿಸ್ಥಿತಿ ಜತೆಯ ಹೋರಾಟದ ಕತೆ ಸೋಜಿಗ ಉಂಟು ಮಾಡಬಹುದು.

ಒಂಟೆಗಳು: ಮರುಭೂಮಿಯ ಹಡಗುಗಳು

ಜಾನ್ ಎಫ್ ವಾಟರ್ಸ್
ಚಿತ್ರಗಳು: ರೆನಾಲ್ಡ್ ರಫಿನ್ಸ

ಕನ್ನಡದಲ್ಲಿ ಪ್ರಭಾಕರ ನಾನಾವಟಿ




ಒಂಟೆಗಳು: ಮರುಭೂಮಿಯ ಹಡಗುಗಳು

ಜಾನ್ ಎಫ್ ವಾಟರ್ಸ್
ಚಿತ್ರಗಳು: ರೆನಾಲ್ಡ ರಫಿನ್ಸ







ಒಂಟೆಗಳು ಒಣ ಮತ್ತು ಉಷ್ಣ ಹವೆ ಇದ್ದಲ್ಲಿ ಜೀವಿಸುತ್ತವೆ. ಅವು ಮರುಭೂಮಿಗಳಲ್ಲಿ ವಾಸಿಸುತ್ತವೆ.ಜನರು ಒಂಟೆಗಳ ಮೇಲೆ ಕುಳಿತು ಪ್ರವಾಸ ಮಾಡುತ್ತಾರೆ. ಅವು ಭಾರವನ್ನು ಕೂಡ ಹೊತ್ತುಕೊಂಡು ಹೋಗುತ್ತವೆ. ಅವು ತೆಂಗಿನಕಾಯಿ, ಜಮಖಾನೆ, ಪಾಮ ಎಣ್ಣೆ, ಖಜೂರಿ, ಉಪ್ಪು, ಧಾನ್ಯ, ಮುಂತಾದ ಪದಾರ್ಥಗಳನ್ನು ಒಂದು ಊರಿಂದ ಮತ್ತೊಂದೂರಿಗೆ ಮುಟ್ಟಿಸುತ್ತವೆ.ಆದ್ದರಿಂದಲೇ ಇದಕ್ಕೆ ಮರುಭೂಮಿಯ ಹಡಗು ಎಂದು ಹೆಸರು ಬಿದ್ದಿದೆ.



ನೀವು ಉಸುಕಿನಲ್ಲಿ ನಡೆದಿದ್ದಿರಾ? ನಡೆಯುವಾಗ ನಿಮ್ಮ ಕಾಲಿನ ಪಾದಗಳು ಮುಳುಗಿದ್ದನ್ನು ಅನುಭವಿಸಿದ್ದಿರಾ? ಒಂಟೆಗಳು ಉಸುಕಿನಲ್ಲಿ ಸಲೀಸಾಗಿ ನಡೆಯಬಹುದು.ಒಂಟೆಗಳ ಪಾದಗಳು ಅಗಲ, ಮೃದು ಮತ್ತು ಪ್ಯಾಡ ಹಾಕಿದ ಹಾಗೆ ಇವೆ. ಹೀಗಾಗಿ ಅವು ಉಸುಕಿನಲ್ಲಿ ಮುಳುಗುವದಿಲ್ಲ ಮತ್ತು ಕಲ್ಲುಬಂಡೆಗಳ ಮೇಲೆ ಕಾಲಿಟ್ಟಾಗ ಜಾರುವದಿಲ್ಲ.


.






ಉಸುಕು ಧೂಳು ನಿಮ್ಮ ಕಣ್ಣಲ್ಲಿ ಹಾರುತ್ತ ಬಂದಿದೆಯೇ? ಒಂಟೆಗಳ ಕಣ್ಣಿನ ರೆಪ್ಪೆಗಳು ಉದ್ದವಾಗಿದ್ದು ಭಾರವಾಗಿರುತ್ತವೆ. ಹೀಗಾಗಿ ಉಸುಕು ಅವುಗಳ ಕಣ್ಣಲ್ಲಿ ಹೋಗದೆ ಹೊರಗೆ ಬೀಳುವದು. ಉಸುಕು ಇಲ್ಲವೆ ಕಸದ ಕಣಗಳು ಎಂದಾದರೂ ನಿಮ್ಮ ಬಾಯಿಯಲ್ಲಿ ಇಲ್ಲವೆ ಮೂಗಿನಲ್ಲಿ ಹಾರುತ್ತ ಬಂದಿವೆಯಾ? ಒಂಟೆಗಳು ತಮ್ಮ ಮೂಗಿನ ಹೊರಳೆಗಳನ್ನು ಮುಚ್ಚಬಹುದು. ಆದ್ದರಿಂದ ಉಸುಕು ಅವುಗಳ ಮೂಗಿನ ಹೊರಳೆಗಳಲ್ಲಿ ಹೋಗಲಾರದು.








ನೀವು ಕೆಲ ಗಂಟೆ ನೀರು ಕುಡಿಯದಿದ್ದರೆ ನೀರಡಿಕೆಯಾಗುವದು. ಒಂಟೆಗಳಿಗೆ ಮಾತ್ರ ಅಷ್ಟೊಂದು ಬೇಗ ಬಾಯಾರಿಕೆ ಆಗುವದಿಲ್ಲ. ಬೇಸಿಗೆ ಕಾಲದಲ್ಲಿ ಅಷ್ಟೊಂದು ಬಿಸಿಲು ಇದ್ದಾಗ ಕೂಡ ಅವು ಎಂಟು-ಹತ್ತು ದಿನಗಳವರೆಗೆ ನೀರು ಕುಡಿಯಲಾರದೆ ಇರಬಹುದು. ಚಳಿಗಾಲದಲ್ಲಿ ಎಂಟು -ಹತ್ತು ವಾರ ನೀರಿಲ್ಲದಿದ್ದರೂ ಅವುಗಳಿಗೆ ನಡೆಯಬಹುದು. ರಸವತ್ತಾದ ಗಿಡ-ಗಂಟಿಗಳ ಎಲೆಗಳಲ್ಲಿಯ ನೀರನ್ನೇ ಅವು ಕುಡಿಯುತ್ತವೆ.







ಉರಿ ಬಿಸಿಲಿದ್ದ ದಿನಗಳಲ್ಲಿ ನೀರಿಲ್ಲದೆ ಜನರು ಮೂರು ದಿನಇರಬಹುದು. ಬಿಸಿಲುಗಾಲದಲ್ಲಿ ಮರುಭೂಮಿಯಲ್ಲಿಯ ಕಲ್ಲುಬಂಡೆಗಳ ಹವಾಮಾನದ ಉಷ್ಣತೆ 65 ಡಿಗ್ರಿ ಸೇಲ್ಸಿಯಸ್ (150 ಡಿಗ್ರಿ ಫ್ಯಾರನಹೀಟ) ದಷ್ಟು ಹೋಗಬಹುದು. ಅಷ್ಟು ಬಿಸಿಲಿನಲ್ಲಿ ಒಂಟೆಯು ಕೂಡ ಸತ್ತು ಹೋಗಬಹುದು. ಜನರು ಕೂಡ ಸಾಯಬಹುದು. ಆದರೆ ಒಂಟೆಯು ಸುಡುವ ಬಿಸಿಲಲ್ಲಿ ತನ್ನ ಶರೀರವನ್ನು ತಂಪಾಗಿ ಇಡಲು ಪ್ರಯತ್ನಿಸುವದು.




ಒಂಟೆಯು ಬೆವರನ್ನು ಸೋರಿಸುವದು. ಅದು ಒಂದು ತಂಪಾಗಿಡುವ ದಾರಿ. ಬೆವರು ಬಿಟ್ಟರೆ 37 ಡಿಗ್ರಿ ಸೆಲ್ಸಿಯಸ್ (98.6 ಡಿಗ್ರಿ ಫ್ಯಾರನಹೀಟ) ದಷ್ಟು ಶರೀರದ ಉಷ್ಣತೆಯನ್ನು ಕಾಪಾಡಬಹುದು. ಹೆಚ್ಚು ಬಿಸಿಲಿದ್ದಾಗ ಬೆವರು ಕೂಡ ಹೆಚ್ಚು ಬರುವದು. ಆಗ ನಾವು ಹೆಚ್ಚು ನೀರು ಕುಡಿಯುತ್ತೇವೆ.






ಮರುಭೂಮಿಯಲ್ಲಿಯ ಬೆಳಗು ಮುಂಜಾನೆಯಲ್ಲಿ ಒಂಟೆಯ ಶರೀರದ ಉಷ್ಣಮಾನವು ಸುಮಾರು 34 ಡಿಗ್ರಿ ಸೆಲ್ಸಿಯಸ್ ಇರುವದು. ಸಂಜೆಯವರೆಗೆ ನಿದಾನವಾಗಿ ಉಷ್ಣಮಾನವು ಹೆಚ್ಚುತ್ತ ಹೋಗುವದು. ಮದ್ಯಾನ್ಹದಲ್ಲಿ 40 ಡಿಗ್ರಿ ಸೆಲ್ಸಿಯಸ್ ಮುಟ್ಟುವದು. ಆಗ ಅದಕ್ಕೆ ಸಾಕಷ್ಟು ಬೆವರು ಬರುವದು. ಮತ್ತೇ ರಾತ್ರಿಯವರೆಗೆ ಉಷ್ಣಮಾನವು ಇಳಿಯುತ್ತ 33 ಡಿಗ್ರಿ ಸೆಲ್ಸಿಯಸ್ ಆಗುವದು.








ಬಹಳ ಬಿಸಿಲು ಇದ್ದ ದಿವಸ ನಾವು ಕೂಡ ಬೇಗನೆ ಹೆಚ್ಚು ಉಷ್ಣತೆಯನ್ನು ಅನುಭವಿಸುತ್ತೇವೆ. ನಮಗೂ ಸಾಕಷ್ಟು ಬೆವರು ಬರುವದು. ನಾವು ಬೆವರಿದ ಹಾಗೆ ನಮ್ಮ ರಕ್ತದ ಉಷ್ಣಮಾನವು ಕಡಿಮೆಯಾಗುವದು. ರಕ್ತವು ನಮ್ಮ ತ್ವಚೆಗೆ ಉಷ್ಣತೆ ಮುಟ್ಟಿಸುವದು. ಒಂದು ರೀತಿಯಲ್ಲಿ ಇದು ಉಷ್ಣತೆಯನ್ನು ದೂರ ಗೊಳಿಸುವ ಪದ್ಧತಿ. ನಾವು ಬೆವೆತಾಗ ನಮ್ಮ ರಕ್ತದಲ್ಲಿಯ ನೀರಿನ ಅಂಶವು ಹೊರಬೀಳುವದು. ರಕ್ತವು ಗಡದ್ದಾಗುವದು. ಹೆಚ್ಚು ಬೆವೆತಂತೆ ರಕ್ತವು ಹೆಚ್ಚು ಗಡದ್ದಾಗುತ್ತ ಹೋಗುವದು. ರಕ್ತವು ಸರಿಯಾಗಿ ತ್ವಚೆಯ ಕಡೆಗೆ ಹರಿಯಲಾರದು. ಆಗ ಶಾಖವನ್ನು ಹೊರಬೀಳಿಸಲು ಸಾಧ್ಯವಾಗಲಿಕ್ಕಿಲ್ಲ. ಹೆಚ್ಚು ನೀರು ಕುಡಿಯದರೆ ಮಾತ್ರ ನಾವು ಜೀವಂತವಿರಬಹುದು.







ಒಂಟೆಯು ಬೆವೆತಾಗ ಅದರ ರಕ್ತದಲ್ಲಿ ಯಾವ ಬದಲಾವಣೆ ಆಗಲಾರದು. ರಕ್ತದಿಂದ ನೀರಿನ ಅಂಶ ಹೊರಬೀಳುವದಿಲ್ಲ. ಶರೀರದ ಇನ್ನುಳಿದ ಅವಯವಗಳಿಂದ ನೀರು ಹೊರಬೀಳುವದು. ಈ ರೀತಿಯಲ್ಲಿ ಒಂಟೆಯ ರಕ್ತವು ತೆಳ್ಳಗಾಗಿಯೇ ಉಳಿಯುವದು. ರಕ್ತವು ತ್ವಚೆಯವರೆಗೆ ಸುಲಭವಾಗಿ ಮುಟ್ಟುವದರಿಂದ ಶಾಖವು ತ್ವಚೆಗೆ ಮುಟ್ಟಿದಂತೆ ಹೆಚ್ಚು ಬೆವರು ಬರುವದು. ಇದರಿಂದ ಅದಕ್ಕೆ ಯಾವ ಅಪಾಯವು ಆಗಲಿಕ್ಕಿಲ್ಲ.




ಇಲ್ಲಿಯವರೆಗೆ ಜನರು ಒಂಟೆಯ ಶರೀರದಲ್ಲಿ ನೀರನ್ನು ಹಿಡಿದಿಡುವ ಒಂದು ವಿಶಿಷ್ಟ ಹೊಟ್ಟೆ ಇದೆ ಎಂದು ತಿಳಿಯುತ್ತಿದ್ದರು. ಕೆಲವರಿಗೆ ಅದರ ಊನುಗಳಲ್ಲಿ ನೀರು ಸಂಗ್ರಹಿಸುತ್ತದೆ ಎಂದೆನ್ನಿಸುತ್ತಿತ್ತು.






ಅರೇಬಿಯನ್ ಒಂಟೆಗಳಿಗೆ ಒಂದೇ ಊನು ಇರುತ್ತದೆ.



ಏಶಿಯನ್ ಒಂಟೆಗಳಿಗೆ ಎರಡು ಊನುಗಳಿರುತ್ತವೆ. ಯಾವ ಒಂಟೆಯು ತನ್ನ ಊನುಗಳಲ್ಲಿ ನೀರು ಶೇಖರಿಸಲಾರದು. ಆದರೆ ನಾವು ಕುಡಿದಂತೆ ಅದು ನೀರನ್ನು ಅಷ್ಟೊಂದು ಬೇಗ ಖರ್ಚು ಮಾಡುವದಿಲ್ಲ. .



ಶರೀರದ ಮೇಲಿನ ಕೂದಲುಗಳು ಕೂಡ ಒಂಟೆಯ ಶರೀರವನ್ನು ತಂಪಾಗಿ ಇಡಲು ಸಹಾಯ ಮಾಡುತ್ತವೆ. ಅದರ ತ್ವಚೆಯ ಮೇಲೆ ಕೆಲ ಇಂಚುಗಳಷ್ಟು ಕೂದಲುಗಳು ಇರುತ್ತವೆ. ಇದರಿಂದಾಗಿ ಸೂರ್ಯನ ಬಿಸಿ ಕಿರಣಗಳು ಅದರ ತ್ವಚೆಯನ್ನು ಮುಟ್ಟಲಾರವು. ಒಂಟೆಯ ಮೇಲಿನ ಕೂದಲುಗಳು ಮೈಮೇಲೆ ಹೊದಿಸಿದ ಬ್ಲಾಂಕೆಟ್ಟಿನಂತೆ ಥಂಡಿಯಿಂದ ಕಾಪಾಡುತ್ತದೆ. ಬ್ಲಾಂಕೆಟ್ಟು ಉಷ್ಣತೆಯನ್ನು ಹೊರಗಿಡುತ್ತದೆ. ನಾವು ಕೂಡ ಬ್ಲಾಂಕೆಟ್ ಮೈಮೇಲೆ ತೆಗೆದುಕೊಂಡು ಮಲಗುತ್ತೇವೆ. ಒಂಟೆಯ ಮೈಮೇಲಿನ ಕೂದಲುಗಳು ಬ್ಲಾಂಕೆಟ್ಟಿನಂತೆ ಉಷ್ಣತೆಯನ್ನು ದೂರ ಇಡುತ್ತವೆ.










ಹೆಚ್ಚಾನುಹೆಚ್ಚು ಪ್ರಾಣಿಗಳ ಮೈಮೇಲೆ ಕೂಬ್ಬು ಬೆಳೆದಿರುತ್ತದೆ. ನಮ್ಮ ಶರೀರದ ಮೇಲೆ ಕೂಡ ಕೊಬ್ಬು ಇದೆ. ಕೊಬ್ಬು ತ್ವಚೆಯ ಕೆಳಗೆ ಇರುತ್ತದೆ. ಕೊಬ್ಬು ಇನ್ಸುಲೇಟರದಂತೆ ಕೆಲಸ ಮಾಡುತ್ತದೆ. ಅದು ಉಷ್ಣತೆಯನ್ನು ಹಿಡಿದಿಟ್ಟು ಪ್ರಾಣಿಗಳನ್ನು ಬೆಚ್ಚಗಿಡುತ್ತದೆ. ಒಂಟೆಯ ಮೈಮೇಲೆ ಕೊಬ್ಬಿನ ಪದರು ಇಲ್ಲ. ಹೀಗಾಗಿ ಅದು ಉಷ್ಣತೆಯನ್ನು ತ್ವಚೆಯಿಂದ ಹೊರಬಿಡುವದು.


PS140
PS140


HUMAN SKIN
sweat pore
fat cells
sweat gland


ಎಲ್ಲ ಪ್ರಾಣಿಗಳಿಗೆ ಜೀವಿಸಲು ಕೊಬ್ಬು ಅವಶ್ಯಕ. ಒಂಟೆಯ ಕೊಬ್ಬು ಅದರ ಊನುಗಳಲ್ಲಿ ಇರುತ್ತದೆ. ಎರಡು ಊನುಗಳಿದ್ದರೆ ಎರಡರಲ್ಲಿಯೂ ಕೊಬ್ಬು ಸಂಗ್ರಹಿತವಾಗಿರುತ್ತದೆ. ಎಷ್ಟೋ ಒಂಟೆಗಳು ಸರಿಯಾದ ವೇಳೆಗೆ ಆಹಾರ ದೊರೆಯದಿದ್ದರೆ ಊನುಗಳಲ್ಲಿಯ ಕೊಬ್ಬನ್ನು ಆಹಾರವಾಗಿ ಮಾರ್ಪಾಡಿಸುತ್ತವೆ.









ಪ್ರಾಣಿಗಳು ತಮ್ಮ ಶರೀರದಲ್ಲಿಯ ಉಪಯೋಗಕ್ಕೆ ಬಾರದ ಪದಾರ್ಥಗಳನ್ನು ನೀರಿನ ಮುಖಾಂತರ ದೇಹದ ಹೊರಗೆ ಚೆಲ್ಲುವವು. ಶರೀರದಲ್ಲಿಯ ನೀರು ಹಾಳು ಪದಾರ್ಥಗಳನ್ನು ಕರಗಿಸಿ ಹೊರಗೆ ಚೆಲ್ಲುತ್ತದೆ. ನಾವು ಮೂತ್ರ ವಿಸರ್ಜನೆ ಮಾಡಿದಾಗ ಈ ಬೇಡಾದ ವಸ್ತುಗಳು ಶರೀರದಿಂದ ಹೊರಗೆ ಬೀಳುವವು. ಒಂಟೆಗಳಲ್ಲಿ ಕೂಡ ಇದೇ ರೀತಿಯ ವ್ಯವಸ್ಥೆ ಇದೆ. ಆದರೆ ಇತರ ಪ್ರಾಣಿಗಳಂತೆ ಒಂಟೆ ಸಾಕಷ್ಟು ಸಲ ಮೂತ್ರವಿಸರ್ಜನೆ ಮಾಡುವದಿಲ್ಲ. ಮನುಷ್ಯಪ್ರಾಣಿ ದಿನದಲ್ಲಿ ಐದಾರು ಸಲವಾದರೂ ಮೂತ್ರವಿಸರ್ಜನೆ ಮಾಡುತ್ತದೆ. ಒಂಟೆ ಮಾತ್ರ ದಿನಕ್ಕೆ ಒಮ್ಮೆ- ಅದು ಕಡಿಮೆ ಪ್ರಮಾಣದಲ್ಲಿ – ಮೂತ್ರವಿಸರ್ಜನೆ ಮಾಡುತ್ತದೆ. ಹೀಗಾಗಿ ಒಂಟೆ ನೀರಿನ ಅಪವ್ಯಯ ಮಾಡದೆ ನೀರನ್ನು ಜಪ್ಪಿಸುತ್ತದೆ.



ಏಳೆಂಟು ದಿನ ಮರುಭೂಮಿಯಲ್ಲಿ ನಡೆದ ಮೇಲೆ ಒಂಟೆಗಳಿಗೂ ನೀರಡಿಕೆಯಾಗುವದು ಸಹಜವಾದ ಮಾತು. ನೀರಿಲ್ಲದಿದ್ದರೆ ಅವು ತೆಳ್ಳಗೆ ಮತ್ತು ಎಲುವಿನ ಹಂದರದ ಹಾಗೆ ಕಾಣುವವು. ಅವುಗಳ ಹೊಟ್ಟೆಯು ಬರಿದಾದಂತೆ ಕಾಣುವದು. ಬೆನ್ನಿನ ಮೇಲಿನ ಭಾರವನ್ನು ಕೆಳಗಿಳಿಸಿದ ಮೇಲೆ ಅವು ನೀರು ಕುಡಿಯಲು ಪ್ರಯತ್ನಿಸುವವು. ಕೆಲ ಒಂಟೆಗಳು 10-15 ನಿಮಿಷ ಒಂದೇ ಸವನೆನೀರು ಕುಡಿಯುವವು. ಒಂದೇ ವೇಳೆಗೆ ಅವು ನೂರಾರು ಲಿಟರ್ಸ ನೀರು ಕುಡಿಯಬಹುದು.







ಸಾಕಷ್ಟು ನೀರು ಕುಡಿದಾದ ಮೇಲೆ ಮತ್ತು ಸ್ವಲ್ಪ ವೇಳೆ ವಿಶ್ರಾಂತಿ ತೆಗೆದುಕೊಂಡ ಮೇಲೆ ಅವು ಮತ್ತೇ ಉಪ್ಪು, ಧಾನ್ಯ, ಚಾಪೆ ಮುಂತಾದವುಗಳ ಭಾರವನ್ನು ತೆಗೆದುಕೊಂಡು ಹೋಗಲು ಸಜ್ಜಾಗುವವು. ಮರುಭೂಮಿಯ ಹಡಗು ಉರಿ ಬಿಸಿಲಲ್ಲಿಯ ಮತ್ತು ಒಂದು ಹನಿ ನೀರು ಸಿಗದ ಮರುಭೂಮಿಯಲ್ಲಿಯ ಪಯಣಕ್ಕೆ ಸಿದ್ಧವಾಗುವವು.

